ಮೇರೆಗೆ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ನನ್ನ ಗೈರು ಹಾಜರಿಯಲ್ಲಿ ಈ ಸಭೆಯ ಅಧ್ಯಕ್ಷತೆ ವಹಿಸಿಕೊಳ್ಳಲು ನಾಮ ನಿರ್ದೇಶನ ಮಾಡಿದ್ದೇನೆ. ಶ್ರೀ ಬಿ. ಆರ್. ಯಾವಗಲ್, ಶ್ರೀ ಯು.ಆರ್. ಸಭಾಪತಿ, ಶ್ರೀ ಅಂಜನಮೂರ್ತಿ, ಶ್ರೀ ಬಿ.ಹೆಚ್. ಬನ್ನಿಕೋಡ್, ಶ್ರೀ ಸಿ. ಚಂದ್ರಕಾಂತ ಬೆಲ್ಲದ, ಮತ್ತು ಶ್ರೀ ಬಿ.ಬಿ. ಶಿವಪ್ಪ.

(4) ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) ಅವರು: ಅಧ್ಯಕ್ಷರೇ,

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಕಲಂ 8(3)ರ ಪ್ರಕಾರ:

1. 1968ರ ಕರ್ನಾಟಕ ರಾಜ್ಯ ನಾಗರೀಕ ಸೇವಾ (ಸ್ಥಳೀಯ ಅಭ್ಯರ್ಥಿಗಳ ವಿಶೇಷ ನೇಮಕಾತಿ) ನಿಯಮಾವಳಿಯ ಸೆಕ್ಷನ್ 6ರ ನಂತರ ಹೊಸ ಭಾಗವೊಂದನ್ನು (ಸೆಕ್ಷನ್ 7) ಆಳವಡಿಸಿ ದಿನಾಂಕ 7.7.99ರಂದು ಹೊರಡಿಸಿದ ಡಿಪಿಎಆರ್ 3 ಎಸ್ಎಲಿಸಿ 98ನೇ ಸಂಖ್ಯೆಯ ಅಧಿಸೂಚನೆ;

2. 1977ರ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿಯ ನಿಯಮ 9ಕ್ಕೆ ತಿದ್ದುಪಡಿ ಮಾಡಿ 3.7.99ರಂದು ಹೊರಡಿಸಿದ ಸಿಆಸುಇ 9 ಎನ್ಆರ್ಆರ್ 98ನೇ ಸಂಖ್ಯೆಯ ಅಧಿಸೂಚನೆ;

3. 1998ರ ಕರ್ನಾಟಕ ಶಿಕ್ಷಣ ಇಲಾಖೆ ಸೇವೆ (ತಾಂತ್ರಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳ ಕರಡನ್ನು ಬಾದಿತರ ಆಕ್ಷೇಪಣೆ ಮತ್ತು ಸಲಹೆಗಳನ್ನು ಬಯಸಿ ದಿನಾಂಕ 16.7.99ರಂದು ಹೊರಡಿಸಿದ ಸಿಆಸುಇ 96 ಸೇನಿಇ 97ನೇ ಸಂಖ್ಯೆಯ ಅಧಿಸೂಚನೆ;

4. 1996ರ ಕರ್ನಾಟಕ ಸಾಮಾನ್ಯ ಸೇವೆಗಳು (ಆಡಳಿತ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳು) (ವೃಂದ ಮತ್ತು ನೇಮಕಾತಿ) ನಿಯಮಗಳಿಗೆ ತಿದ್ದುಪಡಿಗಳನ್ನು ಮಾಡಿ ದಿನಾಂಕ 19.8.99ರಂದು ಹೊರಡಿಸಿದ ಸಿಆಸುಇ 34 ಸೇನಿಇ 98ನೇ ಸಂಖ್ಯೆಯ ಅಧಿಸೂಚನೆ;

5. 1997ರ ಕರ್ನಾಟಕ ಸಾಮಾನ್ಯ ಸೇವೆ (ಸರ್ಕಾರಿ ಗಣಕ ಕೇಂದ್ರದ ವೃಂದ ಮತ್ತು ನೇಮಕಾತಿ) ನಿಯಮಗಳನ್ನು ರಚನೆ ಮಾಡಿ ದಿನಾಂಕ 10.8.99 ರಂದು ಹೊರಡಿಸಿದ ಸಿಆಸುಇ 79 ಸೇನಿಡಿ 97ನೇ ಸಂಖ್ಯೆಯ ಅಧಿಸೂಚನೆ;

6. 1997ರ ಕರ್ನಾಟಕ ಸಾಮಾನ್ಯ ಸೇವೆಗಳು (ಸರ್ಕಾರಿ ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆ) (ನೇಮಕಾತಿ) ನಿಯಮಗಳನ್ನು ತಿದ್ದುಪಡಿ ಮಾಡಿ ದಿನಾಂಕ 30.7.99ರಂದು ಹೊರಡಿಸಿದ ಡಿಪಿಎಆರ್ 84 ಎಸ್ಆರ್ಇ 97ನೇ ಸಂಖ್ಯೆಯ ಅಧಿಸೂಚನೆ;

1956ರ ಕರ್ನಾಟಕ ಸಚಿವರುಗಳ ವೇತನ ಮತ್ತು ಭತ್ಯೆಗಳ ಅಧಿನಿಯಮದ 12(2ಎ)(ಬಿ) ಪ್ರಕಾರ;

7. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ವಿದೇಶ ಪ್ರವಾಸ ಕೈಗೊಂಡ ಸಂಬಂಧವಾಗಿ ದಿನಾಂಕ 2.9.99ರಂದು ಹೊರಡಿಸಿದ ಡಿಪಿಎಆರ್ 0 ಬಿಎಎಂ 98ನೇ ಸಂಖ್ಯೆಯ ಆದೇಶ;

1998ರ ಮೈಸೂರು ಅರಮನೆ (ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮದ ಸೆಕ್ಷನ್ 41 (1)ರ ಪ್ರಕಾರ;

8. 1999ರ ಮೈಸೂರು ಅರಮನೆ (ಅರ್ಜುನ ಮತ್ತು ವರ್ಗಾವಣೆ) ನಿಯಮಗಳನ್ನು ರಚಿಸಿ ದಿನಾಂಕ 16.8.99ರಂದು ಹೊರಡಿಸಿದ ಡಿಪಿಎಆರ್ 59 ಪಿಎಸ್ಆರ್ 98ನೇ ಸಂಖ್ಯೆಯ ಅಧಿಸೂಚನೆ;

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 23ರ ಪ್ರಕಾರ;

9. 1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಸೆಕ್ಷನ್ 6(ಎ)ಗೆ ತಿದ್ದುಪಡಿ ಮಾಡಿ ದಿನಾಂಕ 1.6.99ರಂದು ಹೊರಡಿಸಿದ ಸಿಆಸುಇ 14 ಸೇಲೋಯು 99ನೇ ಸಂಖ್ಯೆಯ ಅಧಿಸೂಚನೆ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ ಕಲಂ 39ರ ಮೇರೆಗೆ;

10. 31.3.99ನೇ ದಿನಾಂಕದ ಎಫ್ಡಿ 86 ಸಿಎನ್ಎಲ್ 99 (19)ನೇ ಸಂಖ್ಯೆಯ ಅಧಿಸೂಚನೆಯಲ್ಲಿನ ಕ್ರಮಸಂಖ್ಯೆ 5ರಲ್ಲಿ ವಿಡಿಯೋ ಮತ್ತು ಆಡಿಯೋ ಕ್ಯಾಸೆಟ್ಗಳ ಮೇಲಿನ ತೆರಿಗೆ ಸಂಬಂಧವಾಗಿ ಸೇರಿಸಲ್ಪಟ್ಟ ಭಾಗದ, 26.6.99ನೇ ದಿನಾಂಕದ ಎಫ್ಡಿ 156 ಸಿಎಸ್ಎಲ್ 99 (1)ನೇ ಸಂಖ್ಯೆಯ ಅಧಿಸೂಚನೆ;

11. 31.3.99ರ ದಿನಾಂಕದ ಎಫ್ಡಿ 86 ಸಿಎನ್ಎಲ್ 99(6)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 26.6.99ರಂದು ಹೊರಡಿಸಿದ ಎಫ್ಡಿ 156 ಸಿಎಸ್ಎಲ್ 99 (2)ನೇ ಸಂಖ್ಯೆಯ ಅಧಿಸೂಚನೆ;

12. ರಾಜ್ಯದ ಕೈಗಾರಿಕಾ ಯೂನಿಟ್ಗಳಲ್ಲಿ ಉಪಯೋಗಿಸಲ್ಪಡುವ ಡೀಸೆಲ್ ಕ್ಯಾಪ್ಟಿವ್ ಜನರೇಷನ್ ಸೆಟ್ಗಳ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಯನ್ನು 31 ಮಾರ್ಚ್ 2000 ಇಸವಿಯವರೆಗೆ ವಿನಾಯಿತಿ ನೀಡಿ 28.6.99ರಂದು ಹೊರಡಿಸಿದ ಎಫ್ಡಿ 157 ಸಿಎಸ್ಎಲ್ 99 (1)ನೇ ಸಂಖ್ಯೆಯ ಅಧಿಸೂಚನೆ;

13. ವರ್ತಕರು ಕೈಗಾರಿಕೋದ್ಯಮಿಗಳನ್ನು ಹೊರತುಪಡಿಸಿ ಬೇರೆಯವರಿಗೆ ಮಾರಾಟ ಮಾಡುವ ಡೀಸೆಲ್ ಜನರೇಷನ್ ಕ್ಯಾಪ್ಟಿವ್ ಸೆಟ್ಗಳ ಮಾರಾಟದ ಮೇಲೆ ನೀಡಬೇಕಾಗಿದ್ದ ತೆರಿಗೆಯನ್ನು ತಕ್ಷಣದಿಂದ ಹಾಗೂ 31ನೇ ಮಾರ್ಚ್ 2000 ಇಸವಿಯವರೆಗೆ ಕಡಿಮೆಗೊಳಿಸಿ ದಿನಾಂಕ 28.6.99ರಂದು ಹೊರಡಿಸಿದ ಎಫ್ಡಿ 157 ಸಿಎಸ್ಎಲ್ 99 (2)ನೇ ಸಂಖ್ಯೆಯ ಅಧಿಸೂಚನೆ;

14. ಹುಬ್ಬಳ್ಳಿಯ ಅಖಿಲ ಕರ್ನಾಟಕ ಮೆದಾ ಗಿರಿಜನರ ಕಲ್ಯಾಣ ಸೇವಾ ಸಂಘ(ರಿ), ಇವರು ಸಿದ್ಧಪಡಿಸುವ ಕೇನ್ ಹಾಗೂ ಬಿದಿರಿನ ವಸ್ತುಗಳನ್ನು ಮಾರಾಟ ಮಾಡುವ ಮಾರಾಟಗಾರರು ಸರ್ಕಾರಕ್ಕೆ ಪಾವತಿಸಬೇಕಾದ ತೆರಿಗೆಯಲ್ಲಿ ವಿನಾಯಿತಿ ನೀಡಿ ದಿನಾಂಕ7.7.99ರಂದು ಹೊರಡಿಸಿದ ಎಫ್‌ಡಿ 154 ಸಿಎಸ್‌ಎಲ್ 98ನೇ ಸಂಖ್ಯೆಯ ಅಧಿಸೂಚನೆ;

15. 1.8.98ನೇ ದಿನಾಂಕ ಎಫ್‌ಡಿ 35 ಸಿಎಸ್‌ಎಲ್ 98 (1) ಮತ್ತು (111) ಸಂಖ್ಯೆಯ ಅಧಿಸೂಚನೆಗಳನ್ನು ತಿದ್ದುಪಡಿ ಮಾಡಿ 2.9.99ರಂದು ಹೊರಡಿಸಿದ ಎಫ್‌ಡಿ 35 ಸಿಎಸ್‌ಎಲ್ 98 (1) ಮತ್ತು (2)ನೇ ಸಂಖ್ಯೆಯ ಅಧಿಸೂಚನೆಗಳು;

16. ರಾಯಚೂರು ಜಿಲ್ಲೆ, ಕೊಪ್ಪಳ ತಾಲ್ಲೂಕು, ಜಿನಿಗೆರೆ ಗ್ರಾಮದಲ್ಲಿರುವ ಮೆ:ಕಲ್ಯಾಣಿ ಇಂಡಸ್ಟ್ರೀಸ್ ಲಿಮಿಟೆಡ್ ಇವರು ಖರೀದಿಸುವ ಕಚ್ಚಾ ಸಾಮಗ್ರಿಗಳ ಮೇಲಿನ ಮಾರಾಟ ತೆರಿಗೆ ವಿನಾಯಿತಿಯನ್ನು ಆರು ವರ್ಷಗಳ ಕಾಲ ಅಂದರೆ ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಿದ ದಿನಾಂಕದಿಂದ ನೀಡಿ, ದಿನಾಂಕ 23.8.99ರಂದು ಹೊರಡಿಸಿದ ಎಫ್‌ಡಿ 73 ಸಿಎಸ್‌ಎಲ್ 99 (1) (3) ಮತ್ತು (4)ನೇ ಸಂಖ್ಯೆಯ ಅಧಿಸೂಚನೆಗಳು;

17. ರಾಜ್ಯದಲ್ಲಿ ನೊಂದಾಯಿತ ವರ್ತಕರು ತಮ್ಮ ಕಚ್ಚಾ ಸಾಮಗ್ರಿಗಳನ್ನು ರಾಯಚೂರು ಜಿಲ್ಲೆಯಲ್ಲಿನ ಮೆ ಕಲ್ಯಾಣಿ ಫೆರೋಸ್ ಇಂಡಸ್ಟ್ರೀಸ್ ಲಿಮಿಟೆಡ್ ಇವರಿಗೆ ಮಾರಾಟ ಮಾಡಿದ್ದಲ್ಲಿ ಅಂತಹ ಕಚ್ಚಾ ಸಾಮಗ್ರಿಗಳ ಮೇಲಿನ ಮಾರಾಟ ತೆರಿಗೆಗೆ 6 ವರ್ಷಗಳ ಕಾಲ ವಿನಾಯಿತಿ ನೀಡಿ 23.8.99ರಂದು ಹೊರಡಿಸಿದ ಎಫ್‌ಡಿ 73 ಸಿಎಸ್‌ಎಲ್ 99 (2)ನೇ ಸಂಖ್ಯೆಯ ಅಧಿಸೂಚನೆ;

18. ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೋಮನಹಳ್ಳಿಯಲ್ಲಿನ ಮೆ: ಬಿಪಿಎಲ್ ಪಿಟಿಐ ಕೆಮಿಕಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಹೊಸದಾಗಿ ಸ್ಥಾಪಿಸಿರುವ ಘಟಕವು ಸಿದ್ಧಪಡಿಸಿದ ವಸ್ತುಗಳ ಮೇಲೆ ಪಾವತಿಸಬೇಕಾದ ಮಾರಾಟ ತೆರಿಗೆಗೆ ಆರು ವರ್ಷಗಳ ಕಾಲ ಕೆಲವು ಷರತ್ತುಗಳ ಮೇಲೆ ವಿನಾಯಿತಿ ನೀಡಿ 9.7.99ನೇ ದಿನಾಂಕದಂದು ಹೊರಡಿಸಿ ಎಫ್‌ಡಿ 14 ಸಿಎಸ್‌ಎಲ್ 98 (1)ನೇ ಸಂಖ್ಯೆಯ ಅಧಿಸೂಚನೆ;

19. ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೋಮನಹಳ್ಳಿಯಲ್ಲಿನ ಮೆ: ಬಿಪಿಎಲ್ ಪಿಟಿಐ ಕೆಮಿಕಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಘಟಕವು ಸಿದ್ಧಪಡಿಸಿದ ವಸ್ತುಗಳನ್ನು ರಾಜ್ಯ ಮತ್ತು ಅಂತರರಾಜ್ಯ ಮಟ್ಟದಲ್ಲಿ ಮಾರಾಟ ಮಾಡುವ ವ್ಯವಹಾರ ಹಾಗೂ ವಾಣಿಜ್ಯ ಚಟುವಟಿಕೆಗಳ ಮೇಲೆ ಪಾವತಿಸಬೇಕಾದ ಕೇಂದ್ರ ಮಾರಾಟ ತೆರಿಗೆಗೆ ವಾಣಿಜ್ಯ ಉತ್ಪಾದನೆ ಪ್ರಾರಂಭಿಸಿದ ದಿನಾಂಕದಿಂದ ಆರು ವರ್ಷಗಳ ಕಾಲ ಕೆಲವು ಷರತ್ತುಗಳ ಮೇಲೆ ವಿನಾಯಿತಿ ನೀಡಿ ದಿನಾಂಕ 9.7.99ರಂದು ಹೊರಡಿಸಿದ ಎಫ್‌ಡಿ 14 ಸಿಎಸ್‌ಎಲ್ 98 (2)ನೇ ಸಂಖ್ಯೆಯ ಅಧಿಸೂಚನೆ;

20. ರಾಜ್ಯದಲ್ಲಿನ ನೊಂದಾಯಿತ ವರ್ತಕರುಗಳು ತನ್ನ ಯಂತ್ರ ಹಾಗೂ ಸಾಧನ ಸಾಮಗ್ರಿಗಳನ್ನು ಮೆ: ಬಿಪಿಎಲ್-ಪಿಟಿಐ ಕೆಮಿಕಲ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಘಟಕಕ್ಕೆ ಒಂದು ಕೋಟಿಗಿಂತ ಹೆಚ್ಚಿನ ಮಾರಾಟ ಮಾಡಿದ್ದಲ್ಲಿ ಅಂತಹ ವರ್ತಕರುಗಳು ನೀಡುವ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 9.7.99ರಂದು ಹೊರಡಿಸಿದ ಎಫ್‌ಡಿ 14 ಸಿಎಸ್‌ಎಲ್ 98(3) ನೇ ಸಂಖ್ಯೆಯ ಅಧಿಸೂಚನೆ;

21. ಬಳ್ಳಾರಿ ಜಿಲ್ಲೆಯ ತೋರಂಗಲಿನಲ್ಲಿರುವ ಮೆ: ಜಿಂದಾಲ್ ವಿಜಯನಗರ ಉಕ್ಕು ನಿಯಮಿತದವರು ಖರೀದಿಸುವ ಕಚ್ಚಾ ಸಾಮಾಗ್ರಿಗಳ ಮೇಲೆ ಪಾವತಿಸಬೇಕಾದ ಮಾರಾಟ ತೆರಿಗೆಗೆ 14 ವರ್ಷಗಳ ಕಾಲ ವಿನಾಯಿತಿ ನೀಡಿ ದಿನಾಂಕ 4.8.99ರಂದು ಹೊರಡಿಸಿದ ಎಫ್‌ಡಿ 12 ಸಿಎಸ್‌ಎಲ್ 99(1)ನೇ ಸಂಖ್ಯೆಯ ಅಧಿಸೂಚನೆ;

22. ರಾಜ್ಯದಲ್ಲಿನ ನೊಂದಾಯಿತ ವರ್ತಕರುಗಳು ಮೆ: ಜಿಂದಾಲ್ ವಿಜಯನಗರ ಉಕ್ಕು ನಿಯಮಿತ ಇವರಿಗೆ ಮಾರಾಟ ಮಾಡುವ ಕಚ್ಚಾ ಸರಕುಗಳ ಮೇಲೆ ಪಾವತಿಸಬೇಕಾದ ತೆರಿಗೆಗೆ 14 ವರ್ಷಗಳ ಕಾಲ ವಿನಾಯಿತಿ ನೀಡಿ ದಿನಾಂಕ 4.8.99ರಂದು ಹೊರಡಿಸಿದ ಎಫ್‌ಡಿ 12 ಸಿಎಸ್‌ಎಲ್ 99(3)ನೇ ಸಂಖ್ಯೆಯ ಅಧಿಸೂಚನೆ;

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯಿದೆಯ ಕಲಂ 31ರ ಮೇರೆಗೆ;

23. 150 ಕೋಟಿ ರೂ.ಗಳಿಗೂ ಹೆಚ್ಚು ಬಂಡವಾಳ ಹೂಡಿರತಕ್ಕ ರಾಜ್ಯದಲ್ಲಿನ ಕೈಗಾರಿಕೆಗಳು ಟ್ರಾಕ್ಟರ್, ಭಾರಿ ವಾಹನಗಳು ಹಾಗೂ 200 ಹೆಚ್.ಪಿ.ಗಿಂತ ಹೆಚ್ಚಿಗೆ ಕೆಪಾಸಿಟಿಯ ವಾಹನಗಳನ್ನು ತಯಾರಿಸಲು ಖರೀದಿಸುವ ಪೂರಕ ಬಿಡಿ ಭಾಗಗಳ ಮೇಲಿನ ಪ್ರವೇಶ ತೆರಿಗೆಗೆ ಆರು ವರ್ಷಗಳ ಕಾಲ ವಿನಾಯಿತಿ ನೀಡಿ ದಿನಾಂಕ 9.7.99ರಂದು ಹೊರಡಿಸಿದ ಎಫ್‌ಡಿ 70 ಸಿಎಸ್‌ಎಲ್ 98ನೇ ಸಂಖ್ಯೆಯ ಅಧಿಸೂಚನೆ;

24. 1.8.98ನೇ ದಿನಾಂಕದಂದು ಹೊರಡಿಸಿದ್ದ ಎಫ್‌ಡಿ 35 ಸಿಎಸ್‌ಎಲ್ 98(3)ನೇ ಸಂಖ್ಯೆಯ ಅಧಿಸೂಚನೆಗೆ ಕೆಲವು ಪದಗಳ ತಿದ್ದುಪಡಿ ಮಾಡಿ 2.9.99ರಂದು ಹೊರಡಿಸಿದ ಎಫ್‌ಡಿ 35 ಸಿಎಸ್‌ಎಲ್ 98 (1)ನೇ ಸಂಖ್ಯೆಯ ಅಧಿಸೂಚನೆ;

25. 100 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಬಂಡವಾಳ ಹೂಡಿರತಕ್ಕ ರಾಜ್ಯದಲ್ಲಿನ ಕೈಗಾರಿಕಾ ಘಟಕಗಳು ಸಿದ್ಧಪಡಿಸುವ ಹಾಟ್ ಮೆಟಲ್ ಮತ್ತು ಪಿಗ್ ಐರನ್‌ಗಳ ತಯಾರಿಕೆಗೆ ಬಳಸುವ ವಿಶೇಷ ಉಕ್ಕಿನ ಕಚ್ಚಾ ಸಾಮಗ್ರಿಗಳ ಮೇಲಿನ ಪ್ರವೇಶ ತೆರಿಗೆಗೆ 6 ವರ್ಷಗಳ ಕಾಲ ವಿನಾಯಿತಿ ನೀಡಿ 23.8.99ರಂದು ಹೊರಡಿಸಿದ ಎಫ್‌ಡಿ 73 ಸಿಎಸ್‌ಎಲ್ 99 (5) ಮತ್ತು (6)ನೇ ಸಂಖ್ಯೆಯ ಅಧಿಸೂಚನೆಗಳು;

26. ರಾಜ್ಯದಲ್ಲಿನ ಕೈಗಾರಿಕಾ ಘಟಕಗಳು 111 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಬಂಡವಾಳ ಹೂಡಿ ತಾನು ತಯಾರಿಸುವ ಡ್ರೈಮ್ಯಾಂಗನೀಸ್ ಡೈಆಕ್ಸೈಡ್ ಬ್ಯಾಟರಿಗಳ ಕಚ್ಚಾ ಸಾಮಗ್ರಿಗಳ ಹಾಗೂ ಉಪಕರಣಗಳ ಮೇಲಿನ ಪ್ರವೇಶ ತೆರಿಗೆಗೆ 6 ವರ್ಷಗಳ ಕಾಲ ವಿನಾಯಿತಿ ನೀಡಿ ದಿನಾಂಕ 9.7.99ರಂದು ಹೊರಡಿಸಿದ ಎಫ್‌ಡಿ 14 ಸಿಎಸ್‌ಎಲ್ 98 (4)ನೇ ಸಂಖ್ಯೆಯ ಅಧಿಸೂಚನೆ;

27. ರಾಜ್ಯದಲ್ಲಿನ ಇಂಟಿಗ್ರೇಟೆಡ್ ಸ್ಟೀಲ್ ಪ್ಲಾಂಟಿನವರು ಸಿದ್ಧಪಡಿಸಿದ ಉಕ್ಕಿನ ವಸ್ತುಗಳ ತಯಾರಿಕೆಗೆ ಪೂರಕ ಕಚ್ಚಾ ಸಾಮಾಗ್ರಿಗಳನ್ನು ಆಮದು ಮಾಡಿಕೊಳ್ಳುವಾಗ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ತಕ್ಷಣದಿಂದ ಮುಂದಿನ 14 ವರ್ಷಕ್ಕೆ ವಿನಾಯಿತಿ ನೀಡಿ ಕೆಲವು ಷರತ್ತುಗಳ ಮೇಲೆ ದಿನಾಂಕ 4.8.99ರಂದು ಹೊರಡಿಸಿದ ಎಫ್‌ಡಿ 12 ಸಿಎಸ್‌ಎಲ್ 99 (2)ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II. **ಶ್ರೀ ಎಂ.ವೈ. ಘೋರ್ಪಡೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) ಅವರು: ಅಧ್ಯಕ್ಷರೇ**

1993 ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ ಕಲಂ 320ರ ಮೇರೆಗೆ;

1999ರ ಕರ್ನಾಟಕ ತಾಲ್ಲೂಕು ಪಂಚಾಯಿತಿ (ವ್ಯವಹಾರಗಳು) ನಿಯಮಾವಳಿಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 2.7.99ರಂದು ಹೊರಡಿಸಿದ ಗ್ರಾಅಪ 259 ತಾಪಸ 98ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

III **ಶ್ರೀ ಹೆಚ್.ವಿಶ್ವನಾಥ್ (ಮಾನ್ಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) ಅವರು: ಅಧ್ಯಕ್ಷರೇ.**

1983ನೇ ಕರ್ನಾಟಕ ಶಿಕ್ಷಣ ಮಸೂದೆಯ ಕಲಂ 145 (4)ರ ಮೇರೆಗೆ;

1. ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲೆಗಳನ್ನು ವೇತನಾನುದಾನಕ್ಕೆ ಒಳಪಡಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ 7.9.99ರಂದು ಹೊರಡಿಸಿದ ಇಡಿ 175 ಪಿಎಂಸಿ 97ನೇ ಸಂಖ್ಯೆಯ ಅಧಿಸೂಚನೆ;

2. ಖಾಸಗಿ ಪೂರ್ವ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳಲ್ಲಿನ ಶಿಕ್ಷಕರ ಹಾಗೂ ಸಿಬ್ಬಂದಿಯ ನಿವೃತ್ತಿ ವೇತನ ಸೌಲಭ್ಯದ ಸಂಬಂಧವಾಗಿ ತಿದ್ದುಪಡಿ ಮಾಡಿ ದಿನಾಂಕ 19.12.98ರಂದು ಹೊರಡಿಸಿದ ಇಡಿ 113 ಪಿಎಂಸಿ 98ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

IV. **ಶ್ರೀ ಸಿ.ಆರ್.ಸಗೀರ್ ಅಹಮ್ಮದ್ (ಮಾನ್ಯ ಸಾರಿಗೆ ಸಚಿವರು) ಅವರು: ಅಧ್ಯಕ್ಷರೇ**

1957ರ ಕರ್ನಾಟಕ ಮೋಟಾರ್ ವಾಹನಗಳ ತೆರಿಗೆ ಕಾಯಿದೆಯ ಕಲಂ 16 (2)ರ ಮೇರೆಗೆ;

ಮೈಸೂರಿನ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಅನ್ನದಾನೇಶ್ವರ ಮಹಾಸಂಸ್ಥಾನ ಮಠಸ್ವಾಮಿ, ವಿದ್ಯಾಪೀಠವು ಖರೀದಿಸುವ ವಾಹನಕ್ಕೆ ಮೋಟಾರು ವಾಹನ ತೆರಿಗೆಯಲ್ಲಿ ವಿನಾಯಿತಿ ನೀಡಿ ದಿನಾಂಕ 22.5.99ರಂದು ಹೊರಡಿಸಿದ ಹೆಚ್‌ಟಿಡಿ 34 ಟಿಎಂಟಿ 99ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

V. ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಮಾನ್ಯ ಕಂದಾಯ ಸಚಿವರು) ಅವರು: ಅಧ್ಯಕ್ಷರೇ

1964ರ ಕರ್ನಾಟಕ ಭೂ ಕಂದಾಯ ಕಾಯಿದೆಯ ನಿಯಮ 194ರ ಮೇರೆಗೆ;

1. ಸಾಕಷ್ಟು ಮಳೆಯಾಗದೆ ಬೆಳೆಗಳು ಕಡಿಮೆ ಪ್ರಮಾಣದಲ್ಲಿ ಬೆಳೆದಿರುವುದರಿಂದ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ 62 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.59,705.75ಗಳನ್ನು ಮನ್ನಾ ಮಾಡಿ ದಿನಾಂಕ 9.7.99ರಂದು ಹೊರಡಿಸಿದ ಆರ್‌ಡಿ 123 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

2. ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ಗ್ರಾಮದ 51 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.60,831.10ಗಳನ್ನು ಮನ್ನಾ ಮಾಡಿ ದಿನಾಂಕ 16.7.99ರಂದು ಹೊರಡಿಸಿದ ಆರ್‌ಡಿ 126 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

3. ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ 153 ಹಾಗೂ 133 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ. 1,44,933.49ಗಳನ್ನು ಮನ್ನಾ ಮಾಡಿ ದಿನಾಂಕ 15.7.99ರಂದು ಹೊರಡಿಸಿದ, ಆರ್‌ಡಿ 332 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆ;

4. ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕಿನ 9 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ.5,905.27ಗಳನ್ನು ಮನ್ನಾ ಮಾಡಿ ದಿನಾಂಕ 31.7.99ರಂದು ಹೊರಡಿಸಿದ ಆರ್‌ಡಿ 439 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆ;

5. ಕೊಪ್ಪಳ ಜಿಲ್ಲೆ ಕೊಪ್ಪಳ ತಾಲ್ಲೂಕಿನ 116 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ. 1,48,224.86ಗಳನ್ನು ಮನ್ನಾ ಮಾಡಿ ದಿನಾಂಕ 29.7.99ರಂದು ಹೊರಡಿಸಿದ ಆರ್‌ಡಿ 148 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆ;

6. ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲ್ಲೂಕಿನ 122 ಹಾಗೂ 21 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ. 1,80,239.83ಗಳನ್ನು ಮನ್ನಾ ಮಾಡಿ ದಿನಾಂಕ 14.7.99ರಂದು ಹೊರಡಿಸಿದ ಆರ್‌ಡಿ 121 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ;

7. ಬೀದರ್ ಜಿಲ್ಲೆ ಬೀದರ್ ತಾಲ್ಲೂಕಿನ 142 ಗ್ರಾಮಗಳ 1997-98ನೇ ಸಾಲಿನ ಭೂ ಕಂದಾಯ ರೂ. 2,77,212.00ಗಳನ್ನು ಮನ್ನಾ ಮಾಡಿ ದಿನಾಂಕ 16.7.99ರಂದು ಹೊರಡಿಸಿದ ಆರ್‌ಡಿ 308 ಟಿಆರ್‌ಎಂ 98ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VI. **ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಅವರು: ಅಧ್ಯಕ್ಷರೇ**

1956ರ ಕರ್ನಾಟಕ ವಿಧಾನಮಂಡಲದ ಸದಸ್ಯರ ವೇತನ, ವಿಶ್ರಾಂತಿ ವೇತನ ಮತ್ತು ಭತ್ಯೆಗಳ ಅಧಿನಿಯಮಗಳ ನಿಯಮ 15 (1ಎ) ಪ್ರಕಾರ:

1. ವಿಧಾನಮಂಡಲದ ಮಾನ್ಯ ಸದಸ್ಯರುಗಳು ಹಾಗೂ ಅವರ ಕುಟುಂಬ ವರ್ಗದವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಿರುವ 1.4.99ನೇ ದಿನಾಂಕದ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 22.8.99ರಂದು ಹೊರಡಿಸಿದ ಎಸಿಟಿ:1:26:ಎಂಎಆರ್:99ನೇ ಸಂಖ್ಯೆಯ ಅಧಿಸೂಚನೆ;

2. ವಿಧಾನಮಂಡಲದ ಮಾನ್ಯ ಸದಸ್ಯರುಗಳು ಹಾಗೂ ಅವರ ಕುಟುಂಬ ವರ್ಗದವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಿರುವ 1.4.99ನೇ ದಿನಾಂಕದ ಅಧಿಸೂಚನೆಗೆ ಒಂದು ಭಾಗವನ್ನು ಸೇರ್ಪಡೆ ಮಾಡಿ ದಿನಾಂಕ 8.7.99ರಂದು ಹೊರಡಿಸಿದ ಎಸಿಟಿಎಸ್:1:145:ಎಂಆರ್:ಎಲ್ಎ:99ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VII. **ಶ್ರೀ ಡಿ.ಕೆ.ಶಿವಕುಮಾರ್ (ಮಾನ್ಯ ಸಹಕಾರ ಮಂತ್ರಿಗಳು) ಅವರು: ಅಧ್ಯಕ್ಷರೇ**

1959ರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆಯ ಕಲಂ 130ರ ಪ್ರಕಾರ;

1960ರ ಸಹಕಾರ ಸಂಘಗಳ ನಿಯಮಾವಳಿಯ ನಿಯಮ 17 (1) ಕ್ಕೆ ತಿದ್ದುಪಡಿ ಮಾಡಿ ದಿನಾಂಕ 12.12.97ರಂದು ಹೊರಡಿಸಿದ ಸಿಎಂಡಬ್ಲ್ಯೂ 1 ಸಿಎಎಂ 97ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

VIII. **ಡಾ:ಬಿ.ಪರಮೇಶ್ವರ್ (ಮಾನ್ಯ ಉನ್ನತ ಶಿಕ್ಷಣ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು) ಅವರು: ಅಧ್ಯಕ್ಷರೇ**

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯಿದೆಯ ನಿಯಮ 8 (9) ರ ಮೇರೆಗೆ;

ಯು.ಜಿ.ಸಿ. ವೇತನವನ್ನು ಮೈಸೂರು ವಿಶ್ವವಿದ್ಯಾಲಯದ ಕಂಪ್ಯೂಟರ್ ಕೇಂದ್ರದ ನೌಕರರಿಗೂ ವಿಸ್ತರಿಸಿ ದಿನಾಂಕ 25.3.99ರಂದು ಹೊರಡಿಸಿದ ಇಡಿ 19 ಯುಎಂವಿ 98ನೇ ಸಂಖ್ಯೆಯ ಆದೇಶವನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು ಮಾನ್ಯ ರೆಡ್ಡಿಯವರೆ, ಈಗ ಕೇವಲ ಈ ಸಭೆಯ ಮುಂದೆ ಕಾಗದ ಪತ್ರಗಳನ್ನು ಮಾತ್ರ ಇಡುತ್ತಿರುವುದು. ಆದುದರಿಂದ ನೀವು ಅದರ ಬಗ್ಗೆ ಈಗ ಚರ್ಚೆ ಮಾಡಬೇಡಿ. ನೀವು ಅದಕ್ಕಾಗಿ ಸೆಪರೇಟ್ ನೋಟೀಸ್ ಕೊಡಿ. ಈಗ ಮಾನ್ಯ ಸಭಾನಾಯಕರು ಅವರ ಮಂತ್ರಿಮಂಡಲದ ಸಹೋದ್ಯೋಗಿಗಳನ್ನು ಈ ಸಭೆಗೆ ಪರಿಚಯಿಸಲಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ:–ಮಾನ್ಯ ಅಧ್ಯಕ್ಷರೆ, ನಾನೇಕೆ ಇಲ್ಲಿ ಇದನ್ನು ಹೇಳುತ್ತಿದ್ದೇನೆಂದರೆ, ಕೆಲವು 1997ನೇ ಇಸವಿಗೆ ಸಂಬಂಧಪಟ್ಟವು ಇವೆ. ಇದರ ಬಗ್ಗೆ ವಿವರಗಳೂ ಕೂಡ ಇದರಲ್ಲಿ ಇಲ್ಲ. ಇದರಲ್ಲಿ ಟ್ಯಾಕ್ಸ್ ಎಕ್ಸ್‌ಂಪ್‌ಷನ್ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ವಿವರಗಳೇ ಇಲ್ಲದೇ ಹಾಗೆಯೇ ಸುಮ್ಮನೇ ಅಪ್ರೂವಲ್ ಆಗಿರುವ ಹಾಗೆ ಇಟ್ಟರೆ ಹೇಗೆ?

ಅಧ್ಯಕ್ಷರು:–ಹಾಗೇನಿಲ್ಲ. ಇದರ ಬಗ್ಗೆ ಸಂಬಂಧಪಟ್ಟಂತೆ ಎಲ್ಲಾ ನೋಟಿಫಿಕೇಷನ್‌ಗಳನ್ನು ಮಾನ್ಯ ಸದಸ್ಯರಿಗೆ ಕಳುಹಿಸಿದ್ದಾರೆ.

SRI.K.N.SUBBAREDDY:- Let the chief Minister, who is also the Finance Minister, say what was the amount exempted....

SRI.D.B. CHANDRE GOWDA:- It is only placing on the table of the House. All other things, you will get the details in the gazette notification.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇಲ್ಲೀನಾಗಿದೆಯೆಂದರೆ 1997-98, 1998-99ನೇ ಇಸವಿಗೆ ಸಂಬಂಧಪಟ್ಟದ್ದನ್ನೆಲ್ಲಾ ಅಪ್ರೂವಲ್‌ಗಾಗಿ ಇಟ್ಟಿದ್ದೀರಿ. But what are these papers. ನೀವು ಹೇಳಿರುವ ಐಟಂಗಳಲ್ಲಿ ಏನೇನು ಇದೆ ಎಂಬುದರ ಬಗ್ಗೆಯಾದರೂ ವಿವರಗಳು ಬೇಕಲ್ಲವೆ?

Mr.SPEAKER:- All those papers will be sent.

Sri.K.N.SUBBAREDDY:- We want the Finance Minister/Chief Minister to give details. Other wise, what is the exemption of amount, we will not be knowing.

ಅಧ್ಯಕ್ಷರು:– ಈಗ ಕೇವಲ ಈ ಸಭೆಯ ಮುಂದೆ ಕಾಗದ ಪತ್ರಗಳನ್ನು ಮಾತ್ರ ಇಡುವುದು. ಇದರ ಬಗ್ಗೆ ವಿವರಗಳೆಲ್ಲ ಗೆಜೆಟ್‌ನಲ್ಲಿ ಬರುತ್ತದೆ. ಗೆಜೆಟ್‌ನ್ನು ಓದುವುದು ನಿಮ್ಮ ಕರ್ತವ್ಯ. ಇನ್ನು ಮುಂದೆ ಗೆಜೆಟ್ ಹೊಸ ಸದಸ್ಯರಿಗೆ ಬರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ರೂಲ್ಸ್ ಆಫ್ ಪ್ರೋಸೀಜರ್ ಪುಸ್ತಕವನ್ನು ನಾನು ಕಳುಹಿಸಿಕೊಡುತ್ತೇನೆ. ಅದನ್ನು ನೋಡಿದ ಮೇಲೆ ಅವರು ಹೇಳಲಿ.

SRI K.N.SUBBAREDDY:- I have seen that. But I want point of information as to what is the amount you have exempted.

Mr.SPEAKER:- We will send it.

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ಮಂತ್ರಿಮಂಡಲದ ಗೌರವಾನ್ವಿತ ಸದಸ್ಯರುಗಳ ಪರಿಚಯವನ್ನು ನಾನು ಈ ಸದನಕ್ಕೆ ಮಾಡಿಕೊಡುವ ಸಲುವಾಗಿ ತಮ್ಮ ಅಪ್ಪಣೆಯನ್ನು ಪಡೆದಿರುವ ಹಿನ್ನೆಲೆಯಲ್ಲಿ ಈಗ ಅವರ ಪರಿಚಯವನ್ನು ಈ ಸದನಕ್ಕೆ ಮಾಡಿಕೊಡುತ್ತಿದ್ದೇನೆ.